# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 29-10-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಖಾರೀಫ್ ಭತ್ತ ಖರೀದಿ ಪ್ರಗತಿಯಲ್ಲಿ

ವಿವಿಧ ರಾಜ್ಯಗಳಲ್ಲಿ FCI ಮೂಲಕ ಭತ್ತ ಖರೀದಿ ಪ್ರಗತಿಯಲ್ಲಿದ್ದು, ಇದುವರೆಗೆ 1.72 ಮಿಲಿಯನ್ ಟನ್ ಭತ್ತ ಖರೀದಿಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಖರೀದಿಯಾಗಿದ್ದಕ್ಕಿಂತ 58 ಶೇಕಡಾ ಹೆಚ್ಚಿನ ಖರೀದಿಯಾಗಿದೆಯೆನ್ನಲಾಗಿದೆ. ಈ ಸೀಸನ್‌ನಲ್ಲಿ 51.8 ಮಿಲಿಯನ್ ಟನ್ ಭತ್ತ ಖರೀದಿಯ ಗುರಿ ಹೊಂದಿದೆಯೆನ್ನಲಾಗಿದೆ. ಹಿಂದಿನ ಸೀಸನ್‌ನ್ಲಿ 50.9 ಮಿಲಿಯನ್ ಟನ್ ಭತ್ತ ಖರೀದಿಯ ಗುರಿಯಾಗಿದ್ದು FCI 60.2 ಮಿಲಿಯನ್ ಟನ್ ಖರೀದಿ ಮಾಡಿತ್ತೆನ್ನಲಾಗಿದೆ. ಹಾಗೂ ಉತ್ಪಾದನೆ 130.29 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದೆ.

## ಗೋಡಂಬಿ ತಿರುಳು ಉತ್ಪಾದನೆಗಳ ರಫ್ತು APEDA ವ್ಯಾಪಿಗೆ

ಗೋಡಂಬಿ ಹಾಗೂ ಅದರ ತಿರುಳು ಉತ್ಪಾದನೆಗಳ ರಫ್ತು **APEDA** ವ್ಯಾಪಿಗೆ ಬಂದಿದೆಯೆನ್ನಲಾಗಿದೆ. DGFT ಯ ನೋಟಿಫಿಕೇಶನ್ ನಲ್ಲಿ CEPCI ಎಲ್ಲಾ ಅಧಿಕಾರ ವ್ಯಾಪ್ತಿಯನ್ನು **APEDA** ನೀಡಲಾಗಿದೆಯೆನ್ನಲಾಗಿದೆ.

## ಕಾಫಿ ದರ 14 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಬ್ರೆಜಿಲ್‌ನಲ್ಲಿ ಮುಂದಿನ ಬೆಳೆಯಲ್ಲಿ ಹೆಚ್ಚಿನ ಉತ್ಪಾದನೆ ನಿರೀಕ್ಷೆ ಯುರೋಪ್‌ನಲ್ಲಿ ಮುಂದಿನ ಬೇಡಿಕೆಯ ಅನಿಶ್ಚಿತತೆ (ಜಾಗತಿಕ ಆರ್ಥಿಕ ಹಿನ್ನಡೆಯಿಂದ) ಮುಂತಾದ ಕಾರಣಗಳಿಂದ ಅರೆಬಿಕಾ ಕಾಫಿ ದರ 14 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ರಾಬೆಸ್ಟಾ ಕಾಫಿ ದರವೂ 14 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಅಲ್ಪಾವಧಿ ಪೂರೈಕೆ ಬಿಗುವಿನಿಂದ ಕೂಡಿದ್ದರೂ ಈ ಸೀಸನ್‌ನಲ್ಲಿ ಪೂರೈಕೆ ಉತ್ತಮವಾಗಿರಲಿದೆಯೆಂದು ಡೀಲರುಗಳ ಅನಿಸಿಕೆಯಾಗಿದೆ.